
ಮಹಾದೇವಿಯ ವಚನಗಳು ಸಿಕ್ಕಿದ್ದವು. ಅವುಗಳಲ್ಲಿ ಅವಳು ತನ್ನ ಅಂತರಂಗವನ್ನು ಕಂಡುಕೊಳ್ಳಲು ಯತ್ನಿಸಿದಳು. ಅರಮನೆಯಲ್ಲಿ ಓಡಾಡುವಾಗ ಅವಳು ಅಕ್ಕನ ವಚನಗಳನ್ನು ಗುನುಗುನಿಸ ತೊಡಗಿದಳು.

ಗಿರಿಯಲ್ಲದೆ ಹುಲ್ಲು ಮರಡಿಯಲ್ಲಾಡುವುದೇ ನವಿಲು?
ಕೊಳನಲ್ಲಿದೆ ಕಿರಿವಳ್ಳ ಕೆಳಸುವುದೇ ಹಂಸ?
ಮಾಮರ ತಳಿತಲ್ಲದೆ ಸ್ವರಗೈಯುವುದೇ ಕೋಗಿಲೆ?
ಪರಿಮಳವಿಲ್ಲದೆ ಪುಷ್ಪ ಕೆಳಸುವುದೇ ಭ್ರಮರ?
ಎನ್ನದೇವ ಚನ್ನಮಲ್ಲಿಕಾರ್ಜುನನಲ್ಲದೆ ಅನ್ಯ ಕೇಳಸುವುದೇ ಎನ್ನ ಮನ

ಅರಮನೆಯ ಉದ್ಯಾನದಲ್ಲಿ ಚಿಲಿಪಿಲಿಗುಟ್ಟುವ ಹಕ್ಕಿಗಳನ್ನು ಕಂಡಾಗ ಅವಳು ಕೇಳುತ್ತಿದ್ದಳು.

ಚಿಲಿಪಿಲಿ ಎಂದೋಡುವ ಗಿಳಿಗಳಿರಾ
ನೀವು ಕಾಣಿರೇ ನೀವು ಕಾಣಿರೇ
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ
ನೀವು ಕಾಣಿರೇ ನೀವು ಕಾಣಿರೇ
ಎರಗಿ ಬಂದಾಡುವ ತುರಹಿಗಳಿರಾ
ನೀವು ಕಾಣಿರೇ ನೀವು ಕಾಣಿರೇ
ಕೊಳನೊಳಗಾಡುವ ಹಂಸಗಳಿರಾ
ನೀವು ಕಾಣಿರೇ ನೀವು ಕಾಣಿರೇ
ಗಿರಿಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೇ ನೀವು ಕಾಣಿರೇ
ಎನ್ನ ಚೆನ್ನಮಲ್ಲಿಕಾರ್ಜುನನೆಲ್ಲಿಹನೆಂದು
ನೀವು ಕಾಣಿರೇ ನೀವು ಕಾಣಿರೇ



ತನ್ನಿಂದ ವಿಮುಖಳಾಗಿ ಕಾಲ ಕಳೆಯುವ ನೀಲಾಂಬಿಕಾ ದೇವಿಯ ಬಗ್ಗೆ ಅಪ್ಪಾಜಿರಾಜನಿಗೆ ಸಿಟ್ಟು ಬರುತ್ತಿತ್ತು. ಚಿಕ್ಕ ವೀರಪ್ಪನನ್ನು ಹೆತ್ತ ಮೇಲೆ ಅವಳಿಗೆ ಮೈಥುನದಲ್ಲಿ ಆಸಕ್ತಿಯೇ ಹೊರಟು ಹೋಯಿತು. ಅಪ್ಪಾಜಿರಾಜ ಸಮಾಗಮಕ್ಕೆ ಬಂದಾಗ ನಯವಾಗಿಯೇ ತಿರಸ್ಕರಿಸುತ್ತಿದ್ದಳು. ಒಂದು ಬಾರಿ ಅಪ್ಪಾಜಿರಾಜ ಕೋಪಗೊಂಡು "ನಾನು ನಿನ್ನ ಗಂಡ ಸಮಾಗಮಕ್ಕೆ ಬಂದಿರುವುದು. ನಿರಾಕರಿಸಲು ನಿನಗೆಷ್ಟು ಧೈರ್ಯ" ಎಂದು ಪ್ರಶ್ನಿಸಿದ.

ನೀಲಾಂಬಿಕಾ ದೇವಿ ಅವನ ಮಾತಿಗೆ ನಕ್ಕಳು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಗಾನು ಒಲಿದೆನವ್ವ ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಗಾನು ಒಲಿದೆನವ್ವ ಭಯವಿಲ್ಲದ, ಭವವಿಲ್ಲದ ನಿರ್ಭಯ ಚೆಲುವಗಾನು ಒಲಿದೆನವ್ವ, ಕುಲಸೀಮೆಯಿಲ್ಲದ ನಿಸ್ಸೀಮ, ಚೆಲುವಗಾನು ಒಲಿದೆನವ್ವ, ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಗಾನು ಒಲಿದೆನಮ್ಮ, ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ, ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೇ.

ಅಪ್ಪಾಜಿರಾಜನಿಗೆ ಅವಮಾನವಾದಂತಾಯಿತು. ಆದರೆ ಅವನೇನೂ ಮಾಡುವಂತಿರಲಿಲ್ಲ. ಬಲಾತ್ಕಾರ ಮಾಡಿ ಬಿಡಲೇ ಎಂದು ಅರೆಕ್ಷಣ ಚಿಂತಿಸಿದ. ಅವನಿಗೆ ಕಾವೇರಿಯೊಡನೆಯ ಸಮಾಗಮ ನೆನಪಾಯಿತು. ಒಂದು ಹೆತ್ತ ಮಾತ್ರಕ್ಕೇ ಇಷ್ಟೊಂದು ನಿರಾಸಕ್ತಿಯೇ ಎಂದು ಅಂದುಕೊಂಡ. ಅವನ